ಊರಿನ ಜೊತೆ ತನ್ನ ಸಂಬಂಧವನ್ನು ಜೀವಂತವಾಗಿಟ್ಟಿರುವುದೆಂದರೆ ತಿಂಗಳಿಗೊಮ್ಮೆ ತಪ್ಪದೇ ಬರುತ್ತಿದ್ದ ಪುರುಷೋತ್ತಮನ ಪತ್ರ ಮಾತ್ರ. ಇತ್ತ ಕ್ಷೇಮ, ನಿನ್ನ ಕ್ಷೇಮಕ್ಕೆ ಬರೆ ಎಂದು ಸುರುವಾಗುವ ಪತ್ರ ಊರಿನ ಸಣ್ಣಪುಟ್ಟ ಘಟನೆಗಳನ್ನು ಬಿಡದೇ ವಿವರವಾಗಿ ಹೇಳುತ್ತಿತ್ತು. ವೈಕುಂಠ ಶಾನಭಾಗರ ಮಗಳ ಮದುವೆ ಮುರಿಯಲು ಅವರ ದಾಯಾದಿ ಕೇಶವ ಶಾನಭಾಗರು ಬೇನಾಮಿ ಪತ್ರ ಬರೆದರೆಂಬ ಗುಮಾನಿಯಿಂದ ಇಬ್ಬರಿಗೂ ಜಗಳವಾಗಿ ನಡುರಸ್ತೆಯಲ್ಲೇ ಚಪ್ಪಲಿಯಿಂದ ಹೊಡಕೊಂಡದ್ದು; ಚಾ ಅಂಗಡಿ ನಾಗಪ್ಪನ ಮಗ ಮೋಟಾರು ಡ್ರೈವರಾಗಿ ಕೆಲಸಕ್ಕೆ ಸೇರಿಕೊಂಡದ್ದು; ದುಗ್ಗಪ್ಪ ಸೆಲ್ವಿಯ ಮಗಳು ನೇಣು ಹಾಕಿಕೊಂಡು ಸತ್ತದ್ದು, ಊರ ಜನ ಅದಕ್ಕೆ ಏನೇನೋ ಅರ್ಥ ಕಟ್ಟಿದ್ದು. ಇತ್ಯಾದಿ ಬರೆದು ನಂತರ ಸ್ವಂತ ಸುದ್ದಿಯನ್ನೂ ಒಂದಿಷ್ಟು ಬರೆಯುತ್ತಿದ್ದ. ನಿನ್ನ ಸುದ್ದಿ ಏನು ಎಂದು ಕೇಳಿತ್ತಿದ್ದ. ಪುರುಷೋತ್ತಮನೂ ರಾಮಚಂದ್ರನೂ ಚಡ್ಡೀ ದೋಸ್ತರು. ಇಬ್ಬರೂ ಕುಮಟೆ ಕಾಲೇಜಿನ ಬ್ಯೂಟಿ ಶಾಂತಕುಮಾರಿಯ ಹಿಂದೆ ತಿರುಗಿ ಬಿ.ಎಸ್ಸಿ ಫೇಲಾದವರು. ಪುರುಷೋತ್ತಮ ಊರಲ್ಲೇ ಅಂಗಡಿ ಇಟ್ಟ. ರಾಮದಾಸ ಹೇಗೋ ಒಂದು ನೌಕರಿ ಹಿಡಿದು ಮುಂಬಯಿಯ ಗದ್ದಲದಲ್ಲಿ ಜೀವನದ ಜಟಕಾಬಂಡಿ ನಡೆಸುತ್ತಿದ್ದ. ಪುರುಷೋತ್ತಮನ ಪತ್ರ ಬಂದ ದಿವಸಗಳಲ್ಲಿ ರಾಮಚಂದ್ರನಿಗೆ ಕಾಲೇಜಿನ ದಿನಗಳ ನೆನಪು ಭುಗಿಲೆದ್ದು ರಾತ್ರಿ ಎಲ್ಲ ವಿಚಿತ್ರಯಾತನೆಯಿಂದ ನರಳುತ್ತಿದ್ದ. ಮುಂಬಯಿಗೆ ಬಂದು ತನ್ನ ಬದುಕು ಜಡವಾಗಿಬಿಟ್ಟಿತು ಅನ್ನಿಸುವುದು. ಕನಿಷ್ಠ ಒಬ್ಬ ಹುಡುಗಿಯನ್ನೂ ಕಾಮಿಸಲಾರದವನಾಗಿದ್ದೇನೆ ಅನಿಸುತ್ತಿತ್ತು. ಕಾಲೇಜಿನಲ್ಲಿದ್ದ ಐದೂ ವರ್ಷಗಳೂ ತನ್ನ ಮನಸ್ಸು ಎಷ್ಟೊಂದು ಪ್ರಫುಲ್ಲವಾಗಿರುತ್ತಿತ್ತು. ಅದಿರಲಿ ಶಾಂತಕುಮಾರಿಯ ಹಿಂದೆ, ದೀಪಾ ಪೈ ಹಿಂದೆ ತಿರುಗುವಾಗ ಇದ್ದ ಜೀವನೋತ್ಸಾಹ ಕೂಡ ಈಗಿಲ್ಲ. ಮುಂಬಯಿಯ ವಾತಾವರಣವೇ ಅಂಥದ್ದಿರಬಹುದು. ಲಿಪ್‌ಸ್ಟಿಕ್ ಬಳಿದ ಬಣ್ಣದ ಮೋರೆಯ ಸೆಟೆದ ಮೊಲೆಯ ಹುಡುಗಿಯನ್ನು ಕಂಡರೆ, ಬಸ್ಸುಗಳಲ್ಲಿ, ಟ್ರೇನುಗಳಲ್ಲಿ ಮೈ ತಾಗಿಸಿದರೆ ಏನೂ ಅನಿಸುವುದೇ ಇಲ್ಲ. ಪುರುಸೊತ್ತಾದರೂ ಎಲ್ಲಿದೆ ಅವರ ಮೈಗೆ ಮೈತಾಗಿಸಿ ಪುಳಕಗೊಳ್ಳಲು, ಅಥವಾ ತಾನೇ ಅಂಥವನೋ.

ಪುರುಷೋತ್ತಮನ ಪತ್ರ ಬಂದ ದಿವಸಗಳಲ್ಲಿ ನಾಗತ್ತೆ ತಪ್ಪದೇ ರಾಮಚಂದ್ರನ ಬಳಿ ಬಂದು ಮಾತಾಡುತ್ತ ಕೂರುವಳು. ಅವನಾಗಿಯೇ ಏನಾದರೂ ಪತ್ರದ ಸುದ್ದಿ ಹೇಳಲಿ ಎಂಬ ಇರಾದೆಯಿಂದ ಊರಿನ ಸುದ್ದಿ ಮಾತಾಡವಳು. ಅಷ್ಟಕ್ಕೂ ಹೇಳದೇ ಹೋದರೆ 'ಈವತ್ತು ನಿನಗೆ ಪತ್ರ ಬಂದ ಹಾಗಿತ್ತು. ಪುರುಷೋತ್ತಮನದೋ ನೋಡ್ತೆ...' ಅಂದೇ ಬಿಡುವಳು. ಅವಳಾಗಿಯೇ ಕೇಳಲಿ ಎಂದು ರಾಮಚಂದ್ರ ಅವಳು ಕೇಳುವವರೆಗೂ ಹೇಳುತ್ತಿರಲಿಲ್ಲ. ಆಮೇಲೆ ಊರಿನ ಎಲ್ಲ ಪುರಾಣವನ್ನೂ ಅಂದರೆ ಪುರುಷೋತ್ತಮನ ಇಡೀ ಪತ್ರದ ಸಾರಾಂಶ ಹೇಳಿದ ಮೇಲೆ ತೊಲಗುವಳು.

ಇಂಥ ಒಂದು ದಿನವೇ ಮಾತಿಗೆ ಮಾತು ಬೆಳೆದು ಆ ಎಲ್ಲದರ ಮೂಲವಾಯಿತು. ಆವತ್ತೇ ಪುರುಷೋತ್ತಮನ ಪತ್ರ ಬಂದಿತ್ತು. ಮುದುಕಿ ರಾಮವಂದ್ರನ ಬಳಿ ಬಂದು ಪುರಾಣ ಶುರು ಮಾಡಿದಳು. ಮಾತಾಡುತ್ತ ಆಡುತ್ತ, ರಾಮಚಂದ್ರ ಅವಳ ಅಕ್ಕನ ಮಗನ ಬಗ್ಗೆ ಏನೋ ಹೇಳಿದ. ಅಷ್ಟಕ್ಕೇ ಅವಳಿಗೆ ಕೋಪವೇರಿ 'ಅವನ ಹೆಸರು ತೊಗೊಳ್ಳಬೇಡ. ಮೊದಲು ನಿನ್ನನ್ನ ನೋಡಿಕೋ. ತನ್ನ ಕಾಲ ಕೆಳಗೆ ಕುಂಬಳಕಾಯಿ ಕೊಳೆತುಬಿದ್ದಿದೆ. ಬೇರೆಯವರ ಕಾಲ ಬುಡದಲ್ಲಿ ಸಾಸಿವೆ ಹೆಕ್ಕಲು ಹೋಗುತ್ತಾನೆ. ಅವನಿಗೇನು ಹೇಳುತ್ತೀ... ನಿನ್ನ ವಂಶದವರೇ ಹಾಗೆ... ಅಪ್ಪ